**ಅಸಲು ದಾವ ಸಂಖ್ಯೆಃ 1/2019**

**ಪಿ.ಡಬ್ಲೂ -1**

**ದಿಃ 01-08-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SGG ರವರಿಂದಃ-**

1. ನಾನು ಬಿ.ಎ., ಟಿ.ಸಿ.ಎಚ್ ಪದವಿಧರಳಾಗಿರುತ್ತೇನೆ. ನಾನು ಸರ್ಕಾರಿ ಮರಾಠಿ ಪೂರ್ಣ ಪ್ರಾಥಮಿಕ ಶಾಲೆ ಕರಳೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ವಾದಪತ್ರ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡಲು ನನ್ನ ವಕೀಲರಿಗೆ ನಾನು ಹಾಗೂ ನನ್ನ ಪತಿ ಮಾಹಿತಿ ನೀಡಿರುತ್ತೇವೆ. ಈ ದಾವೆಯನ್ನು ನಾನು ರಸ್ತೆ ಸಲುವಾಗಿ ಹೂಡಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ 95/3 ಆಗಿರುತ್ತದೆ. ಸದರಿ ಆಸ್ತಿಯ ಮಾಲೀಕರು ಸುಭಾಷ ಒಮನ್ನ ಪಾಟೀಲ, ಚಂದ್ರಕಾಂತ ಒಮನ್ನ ಪಾಟೀಲ ಹಾಗೂ ರಾಜು ಒಮನ್ನ ಪಾಟೀಲ ಆಗಿರುತ್ತಾರೆ. ಸದರಿ ಸರ್ವೆ ನಂಬರ 95/3 ರ ಆಸ್ತಿಯು ಅನ್ಯಸಂಕ್ರಮಣಗೊಂಡಿರುವುದಿಲ್ಲ. ನಾನು ಖರೀದಿ ಮಾಡಿದ ಪ್ಲಾಟ್ 60 x 40 ಅಡಿ ಆಗಿರುತ್ತದೆ, ಆದರೆ ಅದು N.A approved Plot ಆಗಿರುವುದಿಲ್ಲ. ಈ ದಿನದವರೆಗೂ ಸರ್ವೆ ನಂಬರ 95/3 ರ ಆಸ್ತಿಯು ಅನ್ಯಸಂಕ್ರಮಣಗೊಂಡಿರುವುದಿಲ್ಲ. ಸದರಿ ಸರ್ವೆ ನಂಬರ ಆಸ್ತಿಯಲ್ಲಿ ಅದರ ಮಾಲೀಕರು ಪ್ಲಾಟಗಳನ್ನಾಗಿ ಮಾಡಿ ಮಾರಾಟ ಮಾಡಿರುತ್ತಾರೆ. ಪ್ರಸ್ತುತ ಸದರಿ ಪ್ಲಾಟಗಳು ಬೆಳಗಾವಿಯ ಕಾರ್ಪೋರೇಶನ ಹದ್ದಿಗೆ ಬರುತ್ತವೆ ಎಂದರೆ ಸರಿ.

2. ನಾನು ಖರೀದಿಸಿದ ಪ್ಲಾಟನ ಖರೀದಿ ಪತ್ರವು ನೋಂದಾಯಿತ ಖರೀದಿ ಪತ್ರ ಆಗಿರುವುದಿಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರವು 100/- ರೂ.ಗಳ ಬಾಂಡನ ಮೇಲೆ ಆಗಿರುತ್ತದೆ. ಯಾವುದೇ ಆಸ್ತಿಗೆ ಮಾಲೀಕತ್ವ ಹೊಂದಬೇಕಾದರೆ ಅದು ನೋಂದಾಯಿತ ದಾಖಲೆಯ ಮುಖಾಂತರ ಆಗಬೇಕು ಎಂದರೆ ಸರಿ. ಮಾಲೀಕರು ಸರ್ವೆ ನಂಬರ 95/3 ರಲ್ಲಿ ಪ್ಲಾಟ ಮಾಡಿದ ನಂತರ ಅವುಗಳನ್ನು ಪಂಚಾಯಿತಿಯಿಂದ ಪ್ಲ್ಯಾನ್ ಮಾಡಿ ಅನುಮೊದನೇ ಮಾಡಿರುವುದಿಲ್ಲ ಎಂದರೆ ಸರಿ.

ನಾನು ಈವರೆಗೂ ಪ್ಲಾಟನ ಮಾಲೀಕರಿಗೆ ನೋಂದಾಯಿತ ಖರೀದಿ ಪತ್ರ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ. ಆ ರೀತಿ ನೋಂದಾಯಿತ ಖರೀದಿ ಪತ್ರ ಮಾಡಿಕೊಡಬೇಕು ಎಂದು ನಾನು ಮಾಲೀಕರ ವಿರುದ್ಧ ಯಾವುದೇ ಸಿವಿಲ್ ದಾವೆ ಹೂಡಿರುವುದಿಲ್ಲ. ಆದರೆ ನ್ಯಾಯಾಲಯದ ಡಿಕ್ರಿ ಆಗಿರುತ್ತದೆ. ಸದರಿ ಡಿಕ್ರಿಯನ್ನು ನಾನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿ ತಾನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ಅವುಗಳಲ್ಲಿ ಸದರಿ ಡಿಕ್ರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ತಾನು ಸದರಿ ಡಿಕ್ರಿಯನ್ನು ಹಾಜರುಪಡಿಸುವುದಾಗಿ ನುಡಿಯುತ್ತಾರೆ.

3. ಇವತ್ತಿನವರೆಗೂ ನಾನು ಖರೀದಿಸಿದ ಪ್ಲಾಟಗೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ನೋಂದಾಯಿತ ದಾಖಲೆ ಇರುವುದಿಲ್ಲ. ನನ್ನ ಹಾಗೂ ಪ್ರತಿವಾದಿಯರ ನಡುವೆ ದಾವಾ ಸ್ವತ್ತಿನಲ್ಲಿ ರಸ್ತೆ ಬಿಡಬೇಕು ಎಂದು ಯಾವುದೇ ನೋಂದಾಯಿತ ಪತ್ರ ಅಥವಾ ದಾಖಲೆ ಆಗಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಪ್ಲಾಟ ಮಾರಾಟ ಮಾಡಿದ ಮಾಲೀಕರು ಸದರಿ ರಸ್ತೆಯ ಕುರಿತು ಬಾಂಡ್ ಬರೆದುಕೊಟ್ಟಿರುವುದಾಗಿ ನುಡಿಯುತ್ತಾರೆ. ಸದರಿ ಬಾಂಡನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

4. ನನ್ನ ಪ್ಲಾಟನಲ್ಲಿ ನಾನು 2008 ರಲ್ಲಿ ಮನೆ ಕಟ್ಟಿರುತ್ತೇನೆ. ಆ ಸಮಯದಲ್ಲಿ ದಾವಾ ಸ್ವತ್ತು ಎಂದು ನಮೂದು ಮಾಡಲಾದ ರಸ್ತೆ ಅಲ್ಲಿ ಇತ್ತು. ನಾನು ಮನೆ ಕಟ್ಟುವ ಮೊದಲೆ ಸದರಿ ರಸ್ತೆ ಇತ್ತು. ಸದರಿ ರಸ್ತೆಯು ಅನುಮೋದಿತ ರಸ್ತೆ ಆಗಿರುವುದಿಲ್ಲ ಎಂದರೆ ಸರಿ. ಸದರಿ ರಸ್ತೆಯು ಯಾವ ಇಸವಿಯಲ್ಲಿ ತಯಾರು ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. 2008 ನೇ ಇಸವಿಯಲ್ಲಿ ಸದರಿ ರಸ್ತೆ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆ

ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ತಾನು ತನ್ನ ಸ್ವತ್ತು ಖರೀದಿಸಿದ ಖರೀದಿ ಬಾಂಡನಲ್ಲಿ ರಸ್ತೆಯ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಇರುವ ಪ್ಲಾಟಗಳು ಕಾರ್ಪೋರೇಶನ ಹದ್ದಿಗೆ ಬಂದ ನಂತರ ರಸ್ತೆಯ ಕುರಿತು ಯಾವುದಾದರೂ ದಾಖಲೆ ಆದ ಬಗ್ಗೆ ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ-5 ರಂತೆ ಬಿಲ್ಡಿಂಗ್ ನಕಾಶೆನ್ನು ಪಂಚಾಯತಿಯವರಿಗೆ ಹಾಜರುಪಡಿಸಿದಾಗ ಪಂಚಾಯತಿಯವರು ಸದರಿ ನಕಾಶೆಯಲ್ಲಿ ತಮ್ಮ ಸೀಲು ಹಾಕಿ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ರಸ್ತೆಯ ಕುರಿತು ನನ್ನನ್ನು ಹೊರತುಪಡಿಸಿ ಅಕ್ಕಪಕ್ಕದ ಜಾಗದ ಮಾಲೀಕರು ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದಲ್ಲಿ ನನ್ನ ಅಕ್ಕಪಕ್ಕದ ಜಾಗದ ಮಾಲೀಕರಿಗೂ ದಾವಾ ರಸ್ತಯಲ್ಲಿ ಓಡಾಡಲು ಹಕ್ಕು ಇರುತ್ತದೆ ಎಂದು ಬರೆದಿದ್ದು, ಯಾವ ಆಧಾರದ ಮೇಲೆ ಆ ರೀತಿ ಹೇಳಿರುತ್ತೇನೆ ಎಂದರೆ ಸಾಕ್ಷಿ ಸದರಿ ಜಾಗದ ಮಾಲೀಕರು ಸಹ ದಾವಾ ರಸ್ತೆಯನ್ನು ಓಡಾಡಲು ಬಳಸುತ್ತಿರುವ ಕಾರಣ ಆ ರೀತಿ ಬರೆದಿರುವುದಾಗಿ ನುಡಿಯುತ್ತಾರೆ. ಅಕ್ಕಪಕ್ಕದ ಜಾಗದ ಮಾಲೀಕರು ದಾವಾ ರಸ್ತೆಗಾಗಿ ಯಾವುದಾದರೂ ದಾವೆ ಹೂಡಿರುತ್ತಾರಾ ಹಾಗೂ ಅವರಿಗೆ ದಾವಾ ರಸ್ತೆಯ ಮೇಲೆ ಓಡಾಡುವ ಹಕ್ಕು ಇರುತ್ತದೆಯೇ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**